# ಹೃತಿಕ್ ಗಾಸಿಪ್

ಬಾಲಿವುಡ್‌ನಲ್ಲಿ ಬೇರೆ ಹೀರೋಗಳಿಗೆ ಹೋಲಿಕೆ ಮಾಡಿದರೆ ಹೃತಿಕ್ ರೋಶನ್ ಸಂಭಾವಿತ ಸ್ಟಾರ್. ಆತನ ಸುತ್ತ ಗಾಸಿಪ್‌ಗಳನ್ನು ಹರಡುವುದೂ ಕಷ್ಟ. ಸಹನಟಿಯರ ಜತೆಗೆ ಚೆಲ್ಲು ಚೆಲ್ಲಾಗಿ ಅಥವಾ ಕಠಿಣವಾಗಿ ವರ್ತಿಸುವ ಪ್ರಕರಣಗಳು ಇಲ್ಲವೇ ಇಲ್ಲ ಎನ್ನಬಹುದು. ಆದರೆ 'ಕೈಟ್ಸ್' ಚಿತ್ರದಲ್ಲಿ ಹಾಲಿವುಡ್‌ನಿಂದ ಬಂದು ಹೃತಿಕ್ ಜತೆ ನಟಿಸಿದ ಬಾರ್ಬರಾ ಮೋರಿ ಮಾತ್ರ ಇದಕ್ಕೆ ಅಪವಾದ. ಹೃತಿಕ್ ಮತ್ತು ಬಾರ್ಬರಾ ಮೋರಿ ನಡುವೆ ನಿಕಟ ಗೆಳೆತನಕ್ಕಿಂತ ಮೀರಿದ್ದು ಇನ್ನೇನೋ ಸಂಬಂಧ ಇದೆ ಎಂದು ಗಾಸಿಪ್ ಪತ್ರಿಕೆಗಳು ಸಾಕಷ್ಟು ಸುದ್ದಿ ಮಾಡಿದವು. ಅದಕ್ಕೆ ಪೂರಕವಾಗಿ ಹೃತಿಕ್ ಮತ್ತು ಬಾರ್ಬರಾ ರೋಮ್ಯಾಂಟಿಕ್ ಮೂಡ್‌ನಲ್ಲಿದ್ದ ನೂರಾರು ಚಿತ್ರಗಳೂ ಅಂತರ್ಜಾಲ ಪತ್ರಿಕೆಗಳಲ್ಲಿ ಹರಿದಾಡಿದವು. ಕೆಲವು ಪತ್ರಿಕೆಗಳು, 'ಬಾರ್ಬರಾಳ ಜತೆಗಿನ ಸ್ನೇಹದಿಂದಾಗಿ ಹೃತಿಕ್‌ನ ಸಂಸಾರದಲ್ಲಿ ಒಡಕು ಮೂಡಿದೆ. ಹೃತಿಕ್‌ನ ಹೆಂಡತಿ ಸುಸಾನ್ ಮಕ್ಕಳ ಜತೆ ಮನೆಬಿಟ್ಟು ಹೋಗಿದ್ದಾಳೆ' ಎಂದೂ ಬರೆದವು.

ಪತ್ನಿ ಮನೆ ಬಿಟ್ಟು ಹೋಗಿದ್ದನ್ನು ಹೃತಿಕ್ ಅಲ್ಲಗಳೆಯಲಿಲ್ಲ! 'ಹೌದು. ಮನೆಯ ಒಂದು ಫ್ಲೋರ್ ರಿಪೇರಿ ನಡೆದಿದೆ. ಜತೆಗೆ ಬಿಳೀ ಇರುವೆಗಳ ಕಾಟ ತಡೆಯಲು ಸಿಮೆಂಟ್ ಹಚ್ಚುವ ಕೆಲಸ ನಡೆದಿದೆ. ಅದಕ್ಕೆಂದೇ ಆಕೆ ಮನೆ ಬಿಟ್ಟು ಬೇರೆಡೆಗೆ ತೆರಳಿದ್ದಾಳೆ' ಎಂದು ಎಲ್ಲ ವಿವಾದಗಳಿಗೂ ಫುಲ್‌ಸ್ಟಾಪ್ ಹಾಕಿದ!

ಸದ್ಯಕ್ಕೆ ಹೃತಿಕ್ ತನ್ನ ಹೊಸ ಚಿತ್ರದ ಪ್ರಚಾರದಲ್ಲಿ ಬ್ಯುಸಿ. ಜುಲೈನಲ್ಲಿ ಆತ ನಟಿಸಿರುವ 'ಪಾನಿ' ಮತ್ತು 'ಮೈ ಕೃಷ್ಣಾ ಹೂಂ' ಚಿತ್ರಗಳು ತೆರೆಗೆ ಬರಲಿವೆ. ಆ ಬಳಿಕ 'ಕ್ರಿಷ್ 3' ಬಿಡುಗಡೆಯಾಗಲಿದೆ. ಈ ಮಧ್ಯೆ ಶುದ್ಧಿ ಎಂಬ ಚಿತ್ರಕ್ಕೂ ಆತ ಸಹಿ ಹಾಕಿದ್ದು ಶೂಟಿಂಗ್ ನಡೆದಿದೆ. 'ಗಾಸಿಪ್‌ಗಳಿಗೆಲ್ಲ ತಲೆ ಕೆಡಿಸಿಕೊಳ್ಳಲು ಪುರುಸೊತ್ತೆಲ್ಲಿದೆ?' ಎಂದು ನಗುತ್ತಾನೆ ಹೃತಿಕ್!





# ಬ್ಯುಸಿ ಅನೂಷ್ಕಾ

ಬೆಂಗಳೂರಿನ ಬೆಡಗಿ ಅನೂಷ್ಕಾ ಬಾಲಿವುಡ್‌ನಲ್ಲಿ 'ಗಾಡ್‌ಫಾದರ್'ಗಳ ನೆರವಿಲ್ಲದೆ ಮಿಂಚುತ್ತಿರುವುದು ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ. ಎಲ್ಲ ಮೆಗಾಸ್ಟಾರ್‌ಗಳ ಮಧ್ಯೆ ಓಡಾಡುತ್ತಾ, ಉತ್ತಮ ಸಂಬಂಧ ಬೆಳೆಸಿಕೊಂಡಿರುವ ಅನೂಷ್ಕಾ ತನ್ನ ಪ್ರತಿಭೆ ಮತ್ತು ಶ್ರಮದಿಂದಾಗಿ ನಿರ್ದೇಶಕರಿಗೂ ಅಚ್ಚುಮೆಚ್ಚಿನ ಹೀರೋಯಿನ್ ಆಗಿದ್ದಾಳೆ. ಒಂದು ಕಾಲದಲ್ಲಿ ಅವಕಾಶಗಳಿಗೆ ಕಾಯುತ್ತಿದ್ದ ಈಕೆ ಈಗ ಅವಕಾಶಗಳ ಮಹಾಪೂರ ತಾಳಲಾಗದೆ ತೊಂದರೆ ಅನುಭವಿಸುತ್ತಿದ್ದಾಳೆ.

ರಾಜ್‌ಕುಮಾರ್ ಹಿರಾನಿಯ 'ಪೀಕೆ' ಚಿತ್ರದಲ್ಲೂ ಈಕೆ ಇದ್ದಾಳೆ. ಈ ಮಧ್ಯೆ ಅನುರಾಗ್ ಕಾಶ್ಯಪ್‌ನ 'ಬಾಂಬೆ ವೆಲ್ವೆಟ್'ಗೂ ಸಹಿ ಹಾಕಿದ್ದಾಳೆ. ಮೇಲಿನ ಎರಡೂ ಚಿತ್ರಗಳ ಚಿತ್ರೀಕರಣಕ್ಕೆ ಅನೇಕ ಅಡೆತಡೆಗಳ ಹಿನ್ನೆಲೆಯಲ್ಲಿ ಶೂಟಿಂಗ್ ತಡವಾಗುತ್ತಿದೆ. ಹೀಗಾಗಿ ಅನೂಷ್ಕಾ ನಟಿಸಬೇಕಿದ್ದ ಇನ್ನೊಂದು ಚಿತ್ರಕ್ಕೆ ಇದೀಗ ದೀಪಿಕಾಳನ್ನು ಆಯ್ಕೆ ಮಾಡಲಾಗಿದೆಯಂತೆ!

ಇನ್ನೂ 24ರ ಹರೆಯದ ಅನೂಷ್ಕಾಳನ್ನು ಈಗ ಸ್ಟೀವನ್ ಸ್ಪೀಲ್‌ಬರ್ಗ್ ತನ್ನ ಮುಂದಿನ ಚಿತ್ರಕ್ಕೆ 'ಆಯ್ಕೆ ಆಗಬಹುದಾದ ನಟಿ'ಯರ ಪಟ್ಟಿಯಲ್ಲಿ ಸೇರಿಸಿದ್ದಾನಂತೆ. ಕಾಶ್ಮೀರದ ಘರ್ಷಣೆಯ ಹಿನ್ನೆಲೆಯ ಕಥೆಯುಳ್ಳ ಈ ಚಿತ್ರದ ಬಗ್ಗೆ ಈಗಾಗಲೆ ಭಾರೀ ನಿರೀಕ್ಷೆ ಇದೆ. ಆ ಪಾತ್ರ ಸಿಕ್ಕಿದರೆ ಅನೂಷ್ಕಾಳಿಗೆ ಜಾಕ್‌ಪಾಟ್ ಹೊಡೆದಂತೆಯೇ!

■ ಬಿಂದು